# ಶ್ರೀ ಉಗ್ರನರಸಿಂಹ









Tracking:

| sr | Date | Remarks | By |
|---|---|---|---|
| 1 | 15.10.2013 | Typing started on | H K Srinivasa Rao |
| 2 | 15.10.2013 | Typing Ended on | H K Srinivasa Rao |
| 3 | | First Proof Reading | Pending |

## ॥ ಶ್ರೀ ಹಯವದನ ರಂಗವಿಟ್ಠಲ ಗೋಪೀನಾಥೋ ವಿಜಯತೇ ॥

Blessed by Lord and with His divine grace, we are pleased to publish this Magnanimous Work of Sri Sripadarajaru . It is a humble effort to make available this Great work to sadhakas who are interested in the noble path of propagating Acharya Madhwa's Philosophy.

With great humility, we solicit the readers to bring to our notice any inadvertant typographical mistakes that could have crept in, despite great care. We would be pleased to incorporate such corrections in the next versions. Users can contact us, for editable version, to facilitate any value additions.

Contact: H K SRINIVASA RAO, N0 26, 2ND FLOOR, 15TH CROSS, NEAR VIDHYAPEETA CIRCLE, ASHOKANAGAR, BANGALORE 560050. PH NO. 26615951, 9901971176, 8095551774, Email : srkarc@gmail.com

## ಕೃತಜ್ಞತೆಗಳು



ಜನ್ಮಾಂತರದ ಸುಕೃತದ ಫಲವಾಗಿ ಮಧ್ವಮತದಲ್ಲಿ ಜನಿಸಲು, ಪ್ರೇಮಮೂರ್ತಿಗಳಾಗಿ ನನ್ನ ಅಸ್ತಿತ್ವಕ್ಕೆ ಕಾರಣರಾದ, ಈ ಸಾಧನೆಗೆ ಅವಕಾಶಮಾಡಿದ, ನನ್ನ ಪೂಜ್ಯ ಮಾತಾ ಪಿತೃಗಳಾದ, ದಿವಂಗತರಾದ ಲಲಿತಮ್ಮ ಮತ್ತು ಕೃಷ್ಣರಾವ್ ಹೆಚ್ ಆರ್ ಅವರ ಸವಿ ನೆನಪಿನಲ್ಲಿ ಈ "ಜ್ಞಾನ ಯಜ್ಞ"

"ಮಾತೃದೇವೋ ಭವ – ಪಿತೃದೇವೋಭವ - ಆಚಾರ್ಯದೇವೋಭವ"

ಗ್ರಂಥ ಋಣ: ಶ್ರೀಪಾದರಾರಮಠ ದಿಂದ ಪ್ರಕಾಶಿತವಾದ ಶ್ರೀ ಲಕ್ಷ್ಮೀನರಸಿಂಹ ಪ್ರಾದುರ್ಭಾವ ದಂಡಕ

# ಶ್ರೀ ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕಮ್

ಶ್ರೀರಮಾ ಮಾನಿನೀ ಮಾನಸೇಂದೀವರೋತ್ಫುಲ್ಲ ಸಂಫುಲ್ಲ ಚಂದ್ರಾ...ಚಿದಾನಂದ ಸಾಂದ್ರಾ... ಸದಾಸನ್ನುತೇಂದ್ರ...ನಮೋಽಪೇನ್ದ್ರ ನಿಸ್ತಂದ್ರ ನೀಕೇಳು ||

ಆರೀತಿ ಪ್ರಹ್ಲಾದನಲ್ ಸಜ್ಜನಾಹ್ಲಾದನಲ್ ದೈತ್ಯಸತ್ಪುತ್ರರಾವೇಳೆ...ಶ್ರೀಕಾಂತನ ಜ್ಞಾನಭಕ್ತಿ ಕ್ರಿಯಾಗಾಥೆಗಳ್ ಬೋಧೆಗಳ್ ಕೇಳಿ...ತಾವೆಲ್ಲರಾಮಾರ್ಗದಲ್ಲೆ ಸುನಿರ್ದಿಷ್ಟ ಸನ್ಮಾರ್ಗದಲ್ಲೇ... ಪರಾಭೂತ ಷಡ್ವರ್ಗದಲ್ಲೇ ಮನಸ್ಸಿತ್ತು... ಧರ್ಮಾರ್ಥಕಾಮಸ್ಪೃಹಗ್ರಂಥಗಳ್, ಸಿದ್ಧ ಸಂಸಾರ ಸಂಬಂಧಗಳ್ ಹತ್ತುವೂದಾಗದೇ...ದಾನವಾಚಾರ್ಯರಾಶ್ಚರ್ಯದಿಂದಾಗ..ತಾವೇಸು ರೀತಿಂದಲಾಯಸುರೀ ಗದ್ಯಗಳ್ ಪದ್ಯಗಳ್ ಪಾಠಪೇಳ್ದಿದ್ದರ್...ಆ ಪಾಠಗಳ್ ಒಪ್ಪದೇ..... ತಪ್ಪದೇ ನಿಂತು ಮಾರಾಟಗಳ್ ಮಾಡುತ್ತಾ...ವಿಷ್ಣುಭಕ್ತಿಕ್ರಿಯಾಪಾಠಗಳ್ ಪಾಡುತಾ...... ಎಲ್ಲರೊಂದಾಗೆ...ತಾವೇ ನೋಡಿ ಅಂಜ್ಯಾಡಿ...ಇನ್ನೇನು ಈ ಸೂನುಗಳ್ ದೈತ್ಯರಾಟ್ ಸೊನನಲ್.... ಬುದ್ಧಿ ಭೇದೈಸಿ, ದುರ್ಬೋಧಗಳ್ ಕೇಳಿ ದುಸ್ಸಾಧ್ಯರಂತಿಪ್ಪರ್...ಎಂದಾಗಲೇ ಬೇಗಲೇ ದಾನವರಗ್ರನಲ್ ಕೋಪಸಂಶೀಘ್ರನಲ್ ಸೇರಿ...ಪ್ರಹ್ಲಾದನಾಚೇಷ್ಟೆಗಳ್ ನಿಷ್ಠೆಗಳ್ ನುಡಿದರು ||

ಆ ವಾಣಿಗಳ ಕೇಳಿದಂ ಕರ್ಣಕಾರೋಽರ್ಯ ಬಾಣಾಳಿಗಳ್ ರೀತಿ...ಅಪ್ರೀತಿಯಾಸೂತಿ ದುರ್ನೀತಿ, ತಾ ಸೈಸದೇ...ಕೋಪಸಂದೀಪನ್ ಅವೇಶದಿಂದಲ್ ಚಲದ್ ಗಾತ್ರನಾಗೆದ್ದು, ಪ್ರೋದ್ಯದ್ ದಯಾಪಾತ್ರನಂತಿಪ್ಪ ಸತ್ಪುತ್ರಸಂಹಾರದಲ್ ಚಿತ್ತವಂಪೆತ್ತು...ಅವಂ...ಪಾಪ ಸಂವೃತ್ತನೇತ್ರಪ್ರಮಾಕ್ಷೇಕ್ಷನಾಗಲ್, ಸಮಕ್ಷೈಸಿ ದುಷ್ಪೋಕ್ತಿಗಳ್... ಬಾಗುತಾ..ಕೂಗುತಾ...

ಸಾಧು ಸದ್ಭಕ್ತಿಯಿಂದಲ್ ಮಹದ್ಭಕ್ತಿಯಿಂದಲ್ಲಿ ತನ್ನಲಿ ಚೆನ್ನಲ್ಲಿ ಬದ್ಧಾಂಜಲೀಯಾಗಿ... ಸಿದ್ಧಾಂತ ಸದ್ಯುಕ್ತಿಯಿಂದಲಿ ನಿಂದಿದ್ದ ಪ್ರಹ್ಲಾದಧೀಮಂತಗೇ.. ನಿರ್ಮಲಸ್ವಾಂತಗೇ... ಆವೇಳೆ ಪಾದಾಹತವ್ಯಾಳಿಯಂತೇ ಭುಜಶ್ವಾಸಿಗಳ್ ಬೇಸಿಗಳ್ ಬೀಸುತ್ತ ಕಂದಗಾ ತಂದೆ ಸಂಭಾಷಿಪಂ..

ಹೋ... ಎಲೋ ದುರ್ವಿನೀತಾ... ಎಲೋ ಮಂಧಬುದ್ಧೇ, ಎಲೋ, ಇಂತು ನೀ ಸ್ತಬ್ಧನಾದೇತಕೋ...ವಂಶಘಾತಿ, ಎಲೋ ಪಾಪಜಾತೀಯೇ, ನೀ ಹೀಗೆ ಮಚ್ಛಾಸನಾತೀತನಾಗಿಪ್ಪೊಡೇ, ನಿನ್ನನಿನ್ ಆ ಯಮದ್ವಾರಕೇ ಕಳುಹುವೆಂ...

ನೋಡೆಲಾ..ನಾನು ಕೋಪಿಷ್ಠನಾಗಿಪ್ಪೊಡೇ ಅಂಜಿ ಮೂಲೋಽಕಗಳ್, ಲೋಕಪಾಲೀಕಗಳ್ ಕಂಪಕಾಣುತ್ತವೆ... ಇಂಥಾ ಬಲಿಷ್ಠನ್ನ ನೀನೆನ್ನ ಸಂಪದ್ಬಲಶ್ರೀಯನಾಶ್ರೈಸದೇ ಬಿಟ್ಟರಿನಾವನಲ್ ನೀಂ ಬಲಶ್ರೀಯನಾಶ್ರೈಸುವೆಯೋ...ಎಲಾ ಏಕೆ,.. ಮುಚ್ಛಾಸನಾತೀತ ನಾಗೂವಿಯೋ ಕಂದ! ಎಂದರೆ ತಂದೆಗಾ ಕಂದ ಸಂಭಾಷಿಪ....||

ತಂದೆ ಕೇಳಯ್ಯ, ಬ್ರಹ್ಮಾದಿ ಆಸ್ತಂಭ ಪರ್ಯಂತವುಂ.. ಜಂಗಮಂ ಸ್ಥಾವರಾತ್ಮ ಪ್ರಪಂಚೋಚ್ಚನೀಚಪ್ರಜಾನೀಕ...ಯಾವತ್ ತದಾವಾತನಾಧೀನದಲ್ಲಿಪ್ಪುದೋ... ಆತನೇ....ಎನ್ನಗೆ....ನಿನಗೆ... ಇನ್ನು ಮಿಕ್ಕಾದ ಚೈತನ್ಯಕೆಲ್ಲಾ ಬಲಶ್ರೀಯು ತಾನಾದನೇ ಕಾದನೇ... ಕಾಲರೂಪೀಶ್ವರೋರುಕ್ರಮಾಕಾರನೆಂಬಾತನೆ ಆತನೆ..ಆತನೇ....ತೇಜ ಓಜಸ್ಸಹಾಸತ್ವ ಸಮ್ವದ್ಬಲ ಶ್ರೀಂದ್ರಿಯಾತ್ಮನ್...ಸ್ವಯಂ ಶಕ್ತಿಯಿಂದಲ್ ಜಗತ್ ಸರ್ವವಂ ಪುಟ್ಟಿಸೂವಂ, ಸದಾ ಪುಷ್ಟಿಮಾಡುವನೇ...ನಷ್ಟಗೈಸೂವನ್.. ಆ ದೇವನಂ ಪೋರ್ತು ನಮ್ಮಲ್ ಬಲಾದೀಗಳುಂಟೆಂಬ ನಿನ್ನಾಸುರೀಭಾವವಿನ್ನಾದರೂ ನೀಬಿಡೋ... ನೋಡು ಶ್ರೀಕಾಂತನಲ್ ಸ್ವಾಂತ ನೀನಿತ್ತು..ಸರ್ವತ್ರ ಸಮಚಿತ್ತನಾಗಯ್ಯ..ಎನ್ನಯ್ಯನೇ..

ನಿನ್ನಗಾಮೇಲೆ ವಿದ್ವೇಷಮಾಡೂವರಾರಿಲ್ಲವು.. ಅಂತಸ್ಸಿನಲ್ಲಿಪ್ಪ ಕಾಮಾದಿ ಷಡ್ವರ್ಗವೆಂಬಾ ಮಹಾವೈರಿಗಳ್ ಕಳ್ಳರಂತೆ... ಎಲ್ಲರುಂ ದೇಹವೆಂಬೋ ಮಹಾರಾಜಧಾನೀ ವೃಥಾ ಹಾನಿಮಾಡೂವರು... ಅಂಥಾವರಂ ಗೆಲ್ಲದೇ ಕೆಲ್ವರ್ ಈ ದಿಕ್ಕುಗಳ ಸರ್ವವಂ ಗೆದ್ದೆವೆಂತೆಂದು ಹಿಗ್ಗೂವರು.. ಅಂತಸ್ಸಿನಲ್ಲಿಪ್ಪ ಕಾಮಾದಿ ಷಡ್ವರ್ಗಗೆದ್ದಾತಗೇ.. ಜ್ಞಾನಸಂಪೂತಗೇ... ಸಾಧುಸಂಭೂತಸರ್ವಂ ಸಮಂಚೇತಗೇ ಆಮೇಲೆ... ತನ್ ಮೋಹಸಂಜಾತವೆಂತಪ್ಪುದೋ... ಶಾತ್ರವವ್ರಾತವೆಲ್ಲಿಪ್ಪುದಯ್ಯಾ.. ಸದಯ್ಯಾತ್ಮನೇ ತಿಳಿದುನೋಡು..." ಎಂದು ತಾ ನಿಂದು ಮಾತಾಡಲು ॥

ಶತ್ರುವಂತಿಪ್ಪ ಪುತ್ರಾಕೃತಿಂ ಕಾಣುತಾ...ಕೆಂಡಗಳ್ ಕಾರುತ... ವಹ್ನಿಯೊಳಾಜ್ಯಾಹುತಿಯ ಇಟ್ಟಿತಂತಾಗೇ ಭಗ್ಗಂತ ಧಿಗ್ಗಂತ ಸಿಂಹಾಸನ ಸ್ಥಾನದಿಂದೆದುನಿಂದಿದ್ದು ಸಂಭಾಷಿಪಂ ತಂದೆ..

" ಹೋ ಹೋ ಎಲಾ ಪುತ್ರನೇ ಇಂದ ನಾವೊಂದು ಪೇಳುತ್ತಿರಿತ್ತಿದ್ದರೇ... ಒಂದಕೆ ಹತ್ತಾಗಿ, ನೀನೇವನೋ ವಿಷ್ಣುವಂಬಾತ ಬೇರೊಬ್ಬ ತಾನಿಪ್ಪನೆಂದೂಹಿಸೂವಯಾ... ಹೋ...ಹೋ... ಎಲಾ....ಸಾವಿಗೀಬುದ್ಧಿ ನೀ ಸಿದ್ಧಮೀಡೀದಿ...ಎಂಬೋದಿದಂ ವ್ಯಕ್ತವಂತೆಲ್ಲ ನಾಂ ಬಲ್ಲೆ... ಇಂತಲ್ಲದೇ ನಿನ್ನಗೀರೀತಿ ದುರ್ಬುದ್ಧಿ ಪುಟ್ಟೂವದೇ... ಮೃತ್ಯುಸಿದ್ಧರ್ಗೆ ವಿಷ್ಣುತ್ವ ಸಂಭಾಷೆಯಲ್ಲಿಚ್ಛೆ ಬೇಕಾಗಿಹೋದಲ್ಲದೇ ಬಲ್ಲೆನೆಲ್ಲಾ... ಎಲೋ ಮಂದನೇ... ಮಂದಭಾಗ್ಯೋಕ್ತಿಗಳ್ ಏಕ ನೀನಾಡುವೇ ಅಕ್ಕಟಾ. ಎನ್ನಗಿನ್ನಾ ಜಗನ್ನಾಥನಿನ್ನಾವನೋ... ಆತನೆಲ್ಲಪ್ಪ ? "

'ಸರ್ವತ್ರದಲ್ಲಿಪ್ಪ !'

"ನೀನೆಂದಡೇ ಡಿಂಬಕೆ... ಅಡಂಬಕೆ...ಅಡೋಣಗಳ್ ಸಾಕುಮಾಡಿನ್ನುಮೇಲ್ ಈ ಸಭಾಸ್ತಂಭದಲ್ ಶೀಘ್ರ ಸಂರಂಭದಲ್ ತೋರು... ತೋರದೇ ಪೋದೆಯಾ...ನೀ... ಮರುಮಾತನಾಡದ್ದಾಗೆ ಶಿರಚ್ಛೇದ ಮಾಡೂವೆನೋ...ನಿನ್ನಗೀ ವೇಳೆಯಲ್ ವಿಷ್ಣುವೆಂತೆಂದ್ ಅದಾವಾತ ತಾನ್ ಅಡ್ಡಬಂದಾನೋ ನಾ ನೋಡುವೆ..ವಿಷ್ಣುವೇ ಬೇಡಬೇಕಾದ ದಿಕ್ಕಾಗಿ ನಿನಿಗಿಪ್ಪೊಡೇ ಬೇಡಿಕೋ ಮೂರ್ಖನೇ.."

ಎಂದು ಕ್ರೋಧಾಗ್ನಿಯಿಂದುರ್ವಿ, ದುರ್ಭಾಷೆಯಲ್ ತನ್ನ ಪುತ್ರನ್ನ ತಾ ದೂರುತಾ..ಹಾರುತಾ... ಕೈಲಿ ಖಡ್ಗಪೆಟ್ಟವಂ, ಖಡ್ಗವಂ ಕೊಂಡು.. ದುಷ್ಟಂ ಮಹಾದೋರ್ಬಲಿಷ್ಠಂ.. ಸ್ವಯಂ ಮುಷ್ಟಿಯಿಂದಲ್ಲಿ.. ಪೆಟ್ಟಿತ್ತನು...॥

ಆ ಭೀಕರಧ್ವಾನ ಸಂಭಿನ್ನ ದುಷ್ಟಾಸುರೀಗರ್ಭ ಸಂರಂಭವುಂ...ಶುಂಭದಮ್ಭೋದವೀಥೀ ಸಮಾರಂಭಿತೋಜ್ಜೃಂಭವುಂ.. ವೈಷ್ಣವೋತ್ಕೃಷ್ಟ ವಿಶ್ರಂಭವುಂ.. ಶಾತಕುಂಭೋಲ್ಲಸದ್ರತ್ನ ಚಿತ್ರಪ್ರಭಾಗುಂಭವುಂ.. ತತ್ಸಭಾಸ್ತಂಭವುಂ ಆಗಲೇ ಬೇಗಲೇ ಘಳ್ ಘಳಾರಾವ ಉದ್ಭೂತವಾಗೆದ್ದು ಬ್ರಹ್ಮಾಂಡವೆಲ್ಲಾ ಪರಿಸ್ಫೋಟವಂ ಮಾಡುವಂತೊಪ್ಪೆ... ಬ್ರಹ್ಮಾದಿಗಳ್ ತಮ್ಮ ಧಾಮಕ್ಕೆ ವ್ಯಾಘಾತವೇನಾದರುಂ ಬಾಹುದೇನೋ..ಇದೇನ್...ಎಂದು ವಿಭ್ರಾಂತಚೇತಸ್ಕರಾಗಿಪ್ಪರಂತೆ..॥

ದುರಂತೇಕ್ಷಣಂಗಳ್ ಕುಮಾರಾಗ್ರನಲ್ ತುಂಬುತ್ತ..ಆ ಕತ್ತಿ ಕೈಹತ್ತಿ ಪುತ್ರನ್ನ ತಾ ಚಿತ್ರಹಿಂಸಿತ್ತು ಕೊಲ್ಲೂವೆನೆಂದ್ ಆಗ್ರಹೋಗ್ರ ಗ್ರಹಗ್ರಹಸ್ತನಾಗಿ... ಏನು ಮೈತಿಳಿಯದೇ ಕೂಡಿ ಓಡ್ಯಾಡಿ ಬಾಹೋ ಹಿರಣ್ಯಾಖ್ಯಗಾವೇಳೆ ಕಾಲಾಡದದ್ದಾಗೇ ಸಭಾಸ್ತಂಭದಲ್ ತನ್ ಮಹಾರಾವ ತಾನಡ್ಡಕಟ್ಟಿಪ್ಪುದು..॥ ಅಂಥಾ ಮಹಾಧ್ವಾನಕೇಳುತ್ತಲೇ ನಿನ್ತನ್ ಆ ಹೇತುವಂ ಕಾಣದೇ... ಆಗ ಆಸುರೀ ಹಿಂಡುಗಳ್ ಭೂತ ಭೇತಾಳಿಕಾ ತಂಡಗಳ್... ಶಾಕಿನೀ ಡಾಕಿನೀದಂಡುಗಳ್ ಅಂಜಿಬೆಂಡಾದವು...॥

ಆ ವೇಳೆ ಘಟ್ ಘಟ್ ಘಟಾರವದಿಂ ಸೀಳಿ... ಆ ಲೇಲಿಹಾನೋಜ್ವಲ ಜ್ವಾಲೆಗಳ್ ಮಾಲೆಗಳ್ ತುಂಬಿ, ಕಾಳ್ಗಿಚ್ಚುಗಳ್ ಚೆಂದದಿಂ ಜಂತು ಸಂಘಕ್ಕೆ ಸಂತಾಪಗೈಸೇ... ಛಿಟಾ ಛಿಟ್ ಛಿಟಾಂಗಾರಗಳ್ ಬೀಸೆ, ಇದೇವುದೋ ಭೂತ ಉದ್ಭೂತವಾಗೊಪ್ಪಿತಂದಾಗ, ಮೂಲೋಕವೆಲ್ಲಾ ಸಮುಲ್ಲೋಕವಾಗಿಪ್ಪುದೂ...॥

ಆ ವೇಳೆ ತದ್ ಭೃತ್ಯವಾಕ್ ಸತ್ಯವಂ ಮಾಡಬೇಕಾಗಿ ಸರ್ವತ್ರತಾನ್ ತನ್ನ ವ್ಯಾಪ್ತತ್ವವಂ... ಪಥ್ಯವಾಗಿಪ್ಪುವೋಲ್ ಅದ್ಭುತಾಕಾರಪೊತ್ತಂ... ಜಗದ್ಭರ್ತ ತಾನೊಂದೆ ಸಿಂಹಾಕೃತೀಯಾಗದೇ ಮರ್ತ್ಯಮೂರ್ತ್ಯಲ್ಲದೇ...ತತ್ಸಭಾಸ್ತಂಭದಲ್ ಡಿಂಬಸಂಭಾವನಕ್ಕಾಗಿ ಸಂಭೂತನಾದಂ...॥

ದಿತೀಪುತ್ರನ್ ರೂಪವಂಕಂಡು, ಇದೇನೋ ಮಹಾವಿಚಿತ್ರವಾಗಿಪ್ಪುದೇ...ಸಿಂಹದಂತಲ್ಲದೇ ಮರ್ತ್ಯನಂತಲ್ಲದೇ ಯಾವುದೀ ಭೂತವೆಂತೆಂದು ಮೀಮಾಂಸಮಾನಾತ್ಮನಾದಂ...॥

ಜಗತ್ ಸ್ವಾಮಿ ತಾನಾಗಲೇ ತಪ್ತಬಂಗಾರ ಶೃಂಗಾರವಲ್ಯಂತೆ ಕಂಗಳ್.... ಸಮುದ್ಯತ್ ಸಟಾ ಕೇಸರಂಗಳ್...ವಿಜೃಂಭತ್ ಕರಾಳಾಸ್ಯದಂ ಉಗ್ರನಾಸಾ ಸಮುಚ್ಛ್ವಾಸ ನಿಶ್ವಾಸಗಳ್... ಚಂಚಲದ್ ವ್ಯಸ್ತವ್ಯಾಳ ಕ್ಷುರಾಂತೋಗ್ರ ಜಿಹ್ವಾಗ್ರಲೇಲೀಹನಂಗಳ್ ಭ್ರಮದ್ ಭ್ರೂಲ್ಲಲಂಗಳ್... ಹನೂರೋಷ ಭೀಷ್ಣಂಗಳುಂ... ಊರ್ಧ್ವಕರ್ಣಂಗಳುಂ...ಭೂಮಿಭೃತ್ ಕಂದರಾಶ್ಚರ್ಯವವ್ಯಾತ ಘೋರಾಸ್ಯ ನಾಸಾಪುಟಂಗಳ್... ಅದೀರ್ಘೋನ್ನತಗ್ರೀವವುಂ... ದೀರ್ಘದಂತೊಪ್ಪುವೋ ದೇಹವಂ ವಿಸ್ತೃತೋರಸ್ಥಲವ್ಯಕ್ತ ಶ್ರೀವತ್ಸಸತ್ಕೌಸ್ತುಭಾಲಂಕೃತ, ಶ್ರೀರಮಾಲಾಲಿತ ಶ್ರೀತುಳಸ್ಯಾಪ್ತ ಮುಕ್ತಾವಳೀ ಚಿತ್ರರತ್ನಾವಳೀ ಪ್ರಾಂಚದುತ್ಕಾಂಚನೀ ಮಾಲಿಕಾ ಗಂಧಕಸ್ತೂರಿಕಾಲೇಪವುಂ... ಹೀರ ಗಂಭೀರ,

ವಿದ್ಯುತ್ಪ್ರಭಾಕುಂಡಲೋದಾರ ಕೇಯೂರ ಸತ್ಕಂಕಣಾಂಗುಳ್ಯಹಾರಾದಿಕಾಭೂಷಣೋದ್ದೀಪವುಂ... ಉದ್ಯದುತ್ಫಲ್ಲ ಚಂದ್ರಾಂಶುವರ್ಣಪ್ರಭಾಸುರದ್ದೇಹ ರೋಮಮಚ್ಚಟಾ ಪುಲ್ಕವುಂ... ಮತ್ತಶುಂಡಾಲ ಶುಂಡಪ್ರಕಾಂಡ ಪ್ರಚಂಡೋಲ್ಲಸದ್ದೋಹಸಾಹಸ್ರದೀಪ್ತಾಯುಧಾಭೋ ನಖಾನೀಕವುಂ... ಚಕ್ರ ಶಂಖಾದಿ ನಾನಾಯುಧ ಶ್ರೇಷ್ಠ ವಿದ್ರಾವಿತಾಽಭದ್ರ ರಕ್ಷಃ ಪಿಶಾಚಾ ಸುರೋದ್ರೇಕವುಂ...ಪ್ರೋನ್ನಿತಂಬೋರು ಸತ್ ಸಾನು ಜಂಘ ಪ್ರದೇಶಾವೃತ ಪ್ರೋಲ್ಲಸತ್ಪೀತ ಕೌಶೇಯವುಂ...ಬದ್ಧ ಕಾಂಚೀ ಕಟಿಸ್ಥಾನವುಂ.. ಮಂಜು ಮಂಜೀರ ಸಂಚಿನ್ನನಾಧಾಂಘ್ರಿಕಂಜಾತ ವಿನ್ಯಾಸವುಂ...ಕೋಟಿ ಮಾರ್ತಾಂಡ ಸಂಕಾಶವಂ ಪೊಲ್ವುದು...॥

ಅಂಥಾ ದುರಂತಾವಲೋಕವಂತಿಪ್ಪ ಜ್ವಾಲಾನೃಸಿಂಹಾಕೃತಿ ಸ್ವಾಮಿಯಂ ನೋಡುತಾ ದೃಷ್ಟಿಗಳ್ ಬಾಗೆ, ತಾ ನಿಂತು ತನ್ನ ಅವರಜಾ ರಾತಿಯಾದ ಸ್ವಯಂಜ್ಯೋತಿ ಈ ರೀತಿ ತಾನಿಂದಿಗೆ ನಾರಸಿಂಹಾಕೃತೀಯಾಗಿ...॥

" ನಾಂ ಪುತ್ರಸಂಹಾರಕೆ...ಉದ್ಯುಕ್ತನಾಗಿಪ್ಪೊಡೆ... ಎನ್ನ ಸಂಹಾರಕಾಗಿ ಇಲ್ಲಿಗೇ...ಬಂದನೋ...ಇನ್ನುಮೇಲೇ ಈತನಿಂದೆನ್ನಗೇ ಮೃತ್ಯು ತಾ ಸಿದ್ಧವಾಂತಿಪ್ಪುದೇನೋ..॥

ಪುರಾಣಪ್ರಸಿದ್ಧೋಕ್ತಿ ಅಭಿವ್ಯಕ್ತಿಗೈತೇನ್...ಅಹೋ! ಎಂದು ಮಾತಾಡುತಾ ನಿಂತು... ಉದ್ಯದ್ಗದಾಧಾರಿ ತತ್ತೇಜ ಲಕ್ಷ್ಯೈಸದೇ...ಶಲ್ಭ ವಾಕಕ್ಷಭುಕ್ ಜ್ವಾಲೆಯೊಳ್ ಬಿದ್ದುದನ್ನೇ...ಸಮುದ್ ಯುದ್ಧ ಸನ್ನಧನಂತಾಗಿ ನೃಸಿಂಹನಲ್ ಹಾರಿದಂ...॥

ಪೂರ್ವದಲ್ ಆಸ್ಯ ತೇಜೋಂಶದಿಂದಲ್ ಜಗದ್ವಾ ಂತ ಯಾವತ್ತುಮಿಂ ತಾನ್ ಸ್ವಯಂ ಪಾನಮಾಡಿಪ್ಪ ಸತ್ಯಾತ್ಮಗೇ, ಈ ನಾರಸಿಂಹಾತ್ಮಗೇ ಈ ಹಿರಣ್ಯಾಸುರಶ್ರೇಷ್ಠ ಸಂಹಾರ ಹೆಚ್ಚಲ್ಲವು... ಅಂತಾದರುಂ ಲೋಕದೃಷ್ಟ್ಯಾನುಸಾರ ಕ್ರಿಯಾಕಾರಿಯಾಗಿಪ್ಪ ನೃಸಿಂಹನುದ್ಯದ್ಗದಾಧಾರಿ ತಾನಗಿ... ಸದ್ವಿದ್ಯುದಾಭೋದ್ಯಮದ್ವೇಗವೇಗೋರು ಸಂಪದ್ಗದಾದಂಡವಂ ಕೊಂಡು...ಯುದ್ಧಕ್ಕೆ ಬಾಹೋ ಮಹಾದೈತ್ಯವರ್ಯನ್ನ ತಾ ನೋಡಿ... ರೋಷೋಜ್ವಲ ಜ್ವಾಲೆಗಳ್ ಲೇಲಿಹನೋಲ್ಲಸಜ್ಜಿಹ್ವೆಯಿಂದಲ್ ಪ್ರಕಾಶೈಸುತಾ...ಚೀರುತಾ... ಆಗ ಅಟ್ಟಹಾಸಕ್ರಮನ್ಯಾಸದಿಂ ಹಾರುತಾ... ಕೋಟಿ ಸೂರ್ಯಪ್ರಭಾಬೀರುತಾ... ಆ ಗರುತ್ಮಂತಂ ಕಾಳಾಹಿಯಂ ಪಿಡಿಯುವಂತೊಪ್ಪಿ...ತಾನ ಆ ದಿತೀ ಪುತ್ರನಲ್ ದೂಕಿದಂ ಶೀಘ್ರಗಲ್ ಪಿಡಿದನಾವೇಳೆ ತದ್ ಹಸ್ತದೊಳ್ ಸಿಕ್ಕದೇ...ಸುಕ್ಕದೇ ಫಕ್ಕನೇ ಬಿಡಿಸಿಕೊಂಡು ಗದಾ ದಂಡವಂಕೊಂಡು ಸನ್ನದ್ಧ ಸದ್ಯುದ್ಧವಂ ಮಾಡುವೋನ್... ಅಂತೆ ಯಾವಾಗ ನೃಸಿಂನಲ್ ಸಿಕ್ಕಿ, ಮತ್ತೇ ಬಿಡುವಾದನ್... ಆ ವೇಳೆಯಲ್ ಶರ್ವ ಶಕ್ರಾದಿ ದಿಪ್ಪಾಲಕಾನೀಕವುಂ...ಸೂರ್ಯಚಂದ್ರಾದಿ ಸರ್ವಗ್ರಹರ್ಕ್ಷಾಳೀಲೋಕವುಂ ಮೇಘನಂತಾನದೋಳ್ ಲೀನವಾಗಿದ್ದು... "ಇನ್ನೇನು! ಈ ದೇವತಾರಾತಿ, ಈ ನಾರಸಿಂಹಾತ್ಮನಲ್ ಸಿಕ್ಕದೇ ದಕ್ಕದಂತಿಪ್ಪನೇ...! ಈತನ್ ದುಷ್ಟದೈತ್ಯನ್ನ ಗೆಲ್ಲಾರನೋ ಗೆಲ್ವನೋ..." ಎಂದು ತದ್ ವೀರ್ಯವಂ ತಿಳಿಯದೇ...ಭ್ರಾಂತಚಿಂತಾಂತರಂಗೋದ್ಯ ಮದ್ವೇಗದಿಂ...ಕಾಂಬದಂತೆ ಇಪ್ಪುದು...॥

ಆ ಮೇಲ್ ಢಾಲ್ ಕತ್ತಿ ಕೈಗೊಂಡು ಆಯಾಸದಿಂದ ಅಲ್ಲಿ ಆ ದೈತ್ಯನ್...ಈ ನಾಸರಿಂಹಾತ್ಮನಲ್ ಸಂಗರ ಶ್ರಾಂತಿ ಮತ್ತೇನು ತಾ ಕಾಣದೇ..ದೂಕಿದಂ...ತಾಕಿದಂ... ಸೋಕಿದಂ... ಅಂಘ್ರಿವಿನ್ಯಾಸಗಳ್ ಕೂಡಿ ತಾ ಮೇಲೆಯುಂ ಕೆಳಗೆಯುಂ ಶ್ಯೇನ ಪಕ್ಷ್ಯಂತೆ ಸುತ್ತಾಡುತಾ...ಛಿದ್ರವಂ ಕಾಣದೇ...ತನ್ನನೇ ಪಿಡಿವುದಕೆ ಆತನ್ ಅಂತು ಓಡುತಾ ಬಾಹೋ ಬಲ್ಲಿಷ್ಠನಾ ಅಟ್ಟಹಾಸ್ಯೈಸಿಯುಂ ಕೇಸರಂಗಳ್ ಪ್ರಸಾದೈಸಿ...ಕ್ರೂರಾಹಿತಾನಂದು ಅಖುಗ್ರಾಹಿಯಂತೇ ಸ್ವಭಾಸಾಸಿರಂ ಸೂಸಿ ಜಂಘಾಲ ಲೀಲಾ ಸಮುಲ್ಲಂಘನಾ ಗೋಪದಿಂ ಹಾರಿ ಈ ನಾರಹರ್ಯಾಕ್ಷನ್ ಆ ದೈತ್ಯದಕ್ಷನ್ನ ಪಿಡಿರ್ದಂ..॥

ಫಟಾಫಟ್ ತಲಾಘಾತವಂಗೈಲ್ ಬಡಿರ್ದಂ....ಥಟಾ ಥಟ್ ಪದಾಘಾತದಿಂದಲ್ ಹೊಡೆರ್ದಂ...ಗದಾಘಾತದಿಂದಲ್ ಮಹೋರಸ್ ಕಿಡಿರ್ದಂ...ಸಭಾದ್ವಾರದಲ್ ಹಾಕಿ...

ಭಾಸ್ವನ್ನಖ ಶ್ರೇಣಿಯಿಂದಲ್ ಘಟಾ ಘಟ್ ಗರುತ್ಮಂತ ಕಾಲಾಹಿಯಂ ಸೀಳುವೋರೀತಿ... ಜಂಭಾರಿದಂಭೋಳಿಯಂತಾಗಲುಂ...ಸೀಳುತಿರ್ದು ಆ ಮಹಾದೇವನ್ ಆ ಹಗಲ್ ರಾತ್ರಿ ಒಂದಲ್ಲದ್ದಾಗೆ ದಿವಾಸಂಧಿಯಲ್ ಸೀಳಿದಂ ॥

ಘೋರ ಸಂರಂಭ ದಂಷ್ಟ್ರೇಕ್ಷ ವ್ಯಾವೃತ್ ಕರಾಳಾಕ್ಷನಾಗಿ ಸ್ವಜಿಹ್ವಾಗ್ರದಿಂದಲ್ ಲಸದ್ವ್ಯಾತ್ತ ವಕ್ತ್ರಾಂತ ಶೋಣೀಯ ಮಾನಾಧರಾದ್ಯಂತಮಂ... ಲೇಲಿಹಾನೋಗ್ರವಂ ತೋರುತಾ, ರಾಕ್ಷಸಶ್ರೇಷ್ಠನಂ ಪಿಡಿದು... ವಕ್ಷೋನ್ನತಸ್ಥಾನವಂ ತೋಡಿ, ಕಾಸಾರವಂ ಮಾಡುತಾ...ರಕ್ತದಂತೊಪ್ಪುವೋ ತತ್ ತಪಸ್ಸಾರ ಯಾವತ್ತು ತಾ ಪೀರುತಾ...ಬಾರಿ ಬಾರೆದ್ದು ತದ್ದುಷ್ಟರಕ್ತಂಗಳಂ ಬೊಗಸೆಯಲ್ ತುಂಬಿ ಭೇತಾಳ ಭೂತಾಳಿಗೇ ಚಿಮ್ಮುತಾ ಖಂಡ್ರುಗಳ್ ಗೊಂಡು ಹಾರೈಸುತಾ...ಮತ್ತ ಶುಂಡಾಲ ಸಂಹಾರದಲ್ ಮುಂಚುವೋ ಘೋರ ಪಂಚಾನನೋದಾರ ಲೀಲೆಂಗಳಂ ಬೀರುತಾ...ರಾಕ್ಷಸಾಧ್ಯಕ್ಷ ವಕ್ಷಸ್ಸಿನೋಳ್ ಕಿತ್ತುತಾ...ಹಾರಗಳ್ ಮಾಡಿಕೊಂಡೊಪ್ಪಿ ತದ್ರಕ್ತಸಿಕ್ತಾನನೋದ್ಯತ್ ಛಟಾ ಕೇಸರಂಗಳ್ ಪ್ರಕಾಶೈಸುತಾ... ದೈತ್ಯರಾಜೇಂದ್ರನಾ ಪ್ರಾಣಗಳ ಗೊಂಡನ್...॥

ಆ ಮೇಲೆ ಸುತ್ತಿದ್ದ ತದ್ ಬಂಧು ಸಂದೋಹದಲ್ಲಿದ ಅನೇಕಾಸುರಾನೀಕವಂ ಸಾಯುಧೋದ್ರೇಕವಂ...ಅಲ್ಲಕಲ್ಲೋಲವಂ ಮಾಡಿ...ಚಂಚನ್ನಖಶ್ರೇಣಿಯಿಂ ಸಂಹರಂ ಮಾಡಿದಂ...॥

ಆಗ ತದ್ ಭೀಕಾರಾಕಾರವಂ ಕಾಂಬ ಶಕ್ಯಾವುದಂ ಕಾಣದೇ...ತತ್ ಸಟಾ ಕೇಸರೋದ್ಧೂತ ಸಂಘಾತಗಳ್ ಘೋರ ಜೀಮೂತಗಳ್ ಸರ್ವವಂ ನೋಡುತಾ..ಮರ್ತ್ಯಸಿಂಹೋಗ್ರ ದೃಷ್ಟಿಜ್ವಲಜ್ವಾಲೆಗಳ್ ಸೈಸದೇ ಸೂರ್ಯಚಂದ್ರಾದಿ ಸರ್ವಗ್ರಹರ್ಕ್ಷಾವಳೀ ಕಾಂತಿಗಳ್ ತಪ್ಪಿರೇ ತನ್ ಮಹೋಚ್ಛ್ವಾಸದಿಂದ, ಅಬ್ಧಿಸಂದೋಹ ಸಂಕ್ಷೋಭಗೊಂಡು ಎಲ್ಲ ಒಂದಾಯ್ತು...ಆ ದಿಗ್ಗಜಾನೀಕಗಳ್ ಹಿಗ್ಗುತಾ ಕುಗ್ಗುತಾ ದೇವನಾರೀ ವಿಮಾನಾಳಿಯಾಕಾಶದಲ್ ತತ್ಸಟೋತ್ಕ್ಷಿಪ್ತ ಯಾನಾಳಿಯಾಗೆಲ್ಲ ನಿಲ್ಲಾಡದೇ ಸರ್ವವಂ ಸುತ್ತಿತು...॥

ಆ ಪಾದ ಸಂಘಟ್ಟದಿಂದಲ್ ಧರಾಚಕ್ರವಲ್ಲಾಡಿತು... ಆ ಘೋರತೇಜಸ್ಸಿಗವಕಾಶಂಗಳಾಕಾಶವುಂ ಬಾಡಿತು... ಆ ಶಾಕಿನೀ ಡಾಕಿನೀ ಮುಖ್ಯದುಷ್ಟಗ್ರಹಾನೀಕವುಂ ಭೀತಿಗೊಂಡೋಡಿತು... ಆ ಮೇಲೆ ಉದ್ಯತ್ ಸಭಾಮಧ್ಯೇ ದೈತ್ಯೇಂದ್ರ ಸಿಂಹಾಸನಸ್ಥಾನದಲ್ ನಾರಸಿಂಹ ಸಮಾಸೀನನಾಗಿಪ್ಪನ್...॥

ಆ ತೇಜ ಓಜ ಪ್ರಭಾಪುಂಜ ರಂಜನ್ನ...ಭಾಸ್ವತ್ ಕರಾಳೋಗ್ರ ಜಿಹ್ವಸ್ಫುರದ್ ದಂಷ್ಟ್ರ ವಕ್ತ್ರನ್ನ...ಬಿಭ್ರಲ್ಲಸತ್ ಭ್ರೂಯುತನಂ ಆ ಮಹಾಕೋಪ ಸಂರಂಭ ಗಂಭೀರಿ ನೇತ್ರನ್ನ... ಕಣ್ಣೆತ್ತಿ ಕಾಂಬೋದರಲ್ ಬ್ರಹ್ಮರುದ್ರಾದಿಗಳ್ ಶಕ್ತಿಯುಂಸಾಲದೇ ದೂರದಲ್ ಪಾರ್ಶ್ವಭಾಗಸ್ಥರಾಗಿಪ್ಪರಂತೆ...॥

ಆಗ ಮೂಲೋಕ ಸಂತಾಪಿಯಾಗಿಪ್ಪ ದೈತ್ಯನ್ನ ನಾರಾಯಣಂ ನಾರಸಿಂಹಾಕೃತೀಯಾಗಿ ಸಂಹಾರವಂ ಮಾಡಿದಂ" ಎಂಬುದಾವಾರ್ತೆ ಕೇಳುತ್ತಲೇ ದೇವ ನಾರೀ ಜನಂಗಳ್ ಪ್ರಹರ್ಷಾನನೋತ್ಫುಲ್ಲರ್ ಉಲ್ಲಾಸದಿಂ ವಾಸಿತಾಮೋದ ಮಂದಾರ ಕುಂದ ಅರವಿಂದಾದಿ ಸತ್ಪುಷ್ಪ ಸಂತಾನ ವರ್ಷಂಗಳಂ ವರ್ಷಿಸುತ್ತಿಪ್ಪರ್... ಆ ಕಾಲ ಆಕಾಶದಲ್ ನಿಂತು ಆ ದೇವದೀವೀ ಸಮೂಹಂಗಳ್... ಆಯಾ ವಿಮಾನಂಗಳೆಲ್ಲಾ ಮಹಾಸಂಕುಲೀಭೂತವಾಗುಪ್ಪವು...॥

ಆ ದೇವತಾದುಂದುಭಿಧ್ವಾನ ಇಂಬಾಗಿ ತಾ ದೇವ ಗಂಧರ್ವ ಸಂಗೀತ ನಾಟ್ಯಗಳಿಂದ, ಅಪ್ಸರಕಾಮಿನೀ ತಾನಗಾನಂಗಳಿಂದ ಆಕಾಶವುಂ ತುಂಬಿತು...॥

ಆ ಬ್ರಹ್ಮರುದ್ರೇಂದ್ರ ಮುಖ್ಯಾಮರಶ್ರೇಣಿಗಳ್, ಪಿತೃಗಳ್, ಮನ್ವುಗಳ್, ಸಿದ್ಧವಿದ್ಯಾಧರಾನೀಕಗಳ್, ಅಪ್ಸರಾಕಾಮಿನೇರ್, ಆ ಪ್ರಜಾಪಾಲ, ಗಂಧರ್ವರ್, ಆ ಯಕ್ಷ ಕಿಂಪುರುಷರ್, ಆ ಚಾರಣಾನೀಕವುಂ, ಆ ಕಿನ್ನರಸ್ತೋಮ, ನಂದ ಸುನಂದಾದಿ ತತ್ಪಾರ್ಷದಾನೀಕವೆಲ್ಲಾ... ಶಿರೋಭಾಗದಲ್ ಪಾಣಿಗಳ್ ಜೋದಿಸೀತೆಲ್ಲ...ಮುನ್ನ ಅತಿ ದೂರಸ್ಥರಾಗಿದ್ದು ನಿಂತು....ಆ ಮೃಗೇಂದ್ರಾಸನಾಸೀನನಾಗಿಪ್ಪ ಅತ್ಯುಗ್ರ ತೇಜಸ್ವಿಯಂ...ಮೆಲ್ಲನೇ ಬೇರಬೇರಾಗಿ ಕೊಂಡಾಡುತಾ ನಿಂತರ್....॥

ಆ ವೇಳೆಯಲ್ ಬ್ರಹ್ಮ ತಾಂ ಭಾಷಿಪಂ "ನಿನಗೆ ವಂದಿಸುವೆನ್ ತಂದೆ... ನೀನೇ ಅನಂತಂ, ದುರಂತ್ಯೋರುಶಕ್ತ್ಯುಳ್ಳವಂ, ಲೋಕಪಾವಿತ್ರ್ಯ ಕರ್ಮಂ, ಮಹಾಶ್ಚರ್ಯವೀರ್ಯಂ, ಜಗತ್ಸೃಷ್ಟಿ ಸಂರಕ್ಷ ಸಂಹಾರಗಳ್...ಲೀಲೆಯಿಂದಲ್ ಸದಾಮಾಳ್ಪೆಯೋ...ಅವ್ಯಯಾತ್ಮನ್ನೇ ನೀನ್"...ಎಂದನು॥

ಈಶ ತಾ ಬಂದು " ಎಲೋ ತಾತನೇ... ನಿನ್ನಗೆ ಈ ಕೋಪ ಬಾಹೋದಕೆ...ಇಂದು ಆ ಯುಗಾಂತಾಖ್ಯ ವೇಳ್ಯಲ್ಲವೋ... ಕ್ಷುಲ್ಲನ್ ಈ ದೈತ್ಯನ್ ಈ ವೇಳೆ ನಿನ್ನಿಂದ ತಾನ್ ಮೃತ್ಯುಪಾಲಾದನ್... ಅಂತು ಇನ್ನುಮೇಲ್...ಕೋಪಸಂಕ್ಷೇಪ ಮಾಡಯ್ಯ....ಈ ದೈತ್ಯ ಪುತ್ರನ್ನ ಪ್ರಹ್ಲಾದನಂ...ಸರ್ವದಾನಿನ್ನ ಭಕ್ತನ್ನ ಸಂರಕ್ಷಿಸೋ... ಭಕ್ತವಾತ್ಸಲ್ಯದಿಂದ..." ಎಂದನು.

ಇಂದ್ರ ತಾ ನಿಂತು.... " ಎಲೋ ಸ್ವಾಮಿಯೇ ಅಣ್ಣ ತಮ್ಮಂದ್ರದೀಟಾಗಿ ನೀನೇ ಸದಾ ನಮ್ಮ ಸಂರಕ್ಷಿಸುವೆಯೋ... ನಿನ್ನಿಂದಲ್ ಆ ಯಜ್ಞಭಾಗಂಗಳುಂ ನಮ್ಮಗೇ ಮತ್ತೆ ಉಂಟಾದವಯ್ಯಾ.... ಹಿರಣ್ಯಾಸುರಂಗಾದುದು ಈಗ ಎಮ್ಮ ಸಸ್ವಾಂತಗಳ್ ನಿನ್ನಗೇ ಅವಾಸಯೋಗ್ಯತ್ವ ಪೊಂದಿಪ್ಪವಂತೆ

ವಿಕಾಸ್ಯೈಸಿತೋ...ನಿನ್ನ ಶುಶ್ರೂಷೆ ಬೇಕೆಂಬ ಲೋಕಾಳಿಗೇ ಕಾಲ ಸಂಗ್ರಸ್ತವಂತಿಪ್ಪ ಲೋಕಾಳಿಯಲ್ ಯಾವದೂ ಲಕ್ಷ್ಯವಿಲ್ಲಂತೆ... ಮುಕ್ತ್ಯಾದರುಂಹೆಚ್ಚು ನಿಶ್ಚೈಸುವಂತೇ...ನೃಹರ್ಯಾತ್ಮನೇ...ಮಿಕ್ಕ ಸಂಭೂತಿಯಿಂದಾಗಬೇಕಾದುದೇನಿಪುದು... ಎಂದಂ...||

ಋಷಿಸ್ತೋಮವುಂ ನಿಂತು... "ಎಲೋ ಬೊಮ್ಮ ನೀ ನಮ್ಮ ಶ್ರೀಯಸ್ಸಿಗೇ ಮುನ್ನ ನಿನ್ನ ಸ್ವತೇಜಾಂಶವನ್ನೇ ತಪೋಯೋಗವಂ... ನಮಗೆ ಕೊಟ್ಟೆಯೋ... ಆತಪಸ್ಸಿಂದ ನಿನ್ನಲ್ಲಿಹೋ ವಿಶ್ವವೆಲ್ಲಾ ಬಹೀರಂಗಮಾಡಿದೆಯೋ...ನಮ್ಮದಂಥಾ ತಪಸ್ಸಂ ಹಿರಣ್ಯಾಸುರಶ್ರೇಷ್ಠಕದ್ದನ್... ಅಂತಿದ್ದನೇ ಈಗ ನೀನೀ ಜಗದ್ರಕ್ಷಣಕ್ಕಾಗಿಯೇ...ಭಕ್ತ ಸಂರಕ್ಷನೇ...ನಾರಹರ್ಯಕ್ಷನಾಗಿನ್ನು ರಕ್ಷೋಗಣಾಧ್ಯಕ್ಷ ವಕ್ಷಸ್ಕವಂ ಸೀಳಿ ನೀ ನಮಗೆಲ್ಲಾ ತಪೋಯೋಗವಂ ಮತ್ತೆತಂದಿತ್ತೆ..." ಎಂತೆಂದರು...||

ಪಿತೃಗಳ್ ನಿಂತು " ಏಲೋ ಧರ್ಮರೂಪಿಯೆ...ಇಂಥಾ ಕ್ರಿಯಾಲಾಪಗಳ್ ಪುತ್ರರಿಂದಲ್...ತಿಲೋದಂಗಳಿಂದಲ್, ಮಹಾಪುಣ್ಯತೀರ್ಥಂಗಳಲ್...ಕ್ಷೇತ್ರಪಾತ್ರಂಗಳಲ್, ನಮ್ಮ ನಮ್ಮಲ್ಲಿ ಇಂತಿತ್ತ ಶ್ರಾಧಂಗಳಂ...ತನ್ನ ಪ್ರೀತ್ಯರ್ಥವೆಂತಿದ್ದನ್ನೈ...ನಾಥ...ಸಂಪೂರ್ಣ ಸೌಭಾಗ್ಯ ಸಂಸ್ಥಾನಿಯೋ ನೀನು...ಭಾಸ್ವನ್ನಖಶ್ರೇಣಿಯಿಂದಲ್ ಮಹಾದೈತ್ಯವಕ್ಷಸ್ಕವಂ ಸೀಳಿ ಇತ್ತಾವ ಪೈತ್ರಾತ್ರಿಕಾ ಶ್ರಾದ್ಧ ನಮ್ಮಲಿ ತಾಸೇರಿತ್ತೈ...ನಾರಹರ್ಯಾತ್ಮನೇ, ನಿನಗೆ ನಾವು ಸಾಷ್ಟಾಂಗ ಪ್ರಣಾಮಗಳ್ ಮಾಡುವೇವು..." ಎಂದರು||

ಸಿದ್ಧರೆಲ್ಲಾ ಅಂಜಲೀಬದ್ಧರಾಗಿ, ಎದ್ದು..."ಎಲೋ...ಅಷ್ಟಸಿದ್ಧಾತ್ಮನೇ, ತಮ್ಮಲಿದ್ದಾ ಮಹಾಯೋಗಸಿದ್ಧೀಗಳೆಲ್ಲಾ...ತಪೋಯೋಗ ಸಾಮರ್ಥ್ಯದಿಂ ಕದ್ದನೇ...'ಗೆದ್ದೆನ್' ಎಂತಿದ್ದ ದೈತ್ಯಪ್ರಬುದ್ಧನ್ನ...ವಕ್ಷಸ್ಕ ಸಂಭಿನ್ನವಂ ಮಾಡಿ... ಆ ನಮ್ಮಗಾಧಾರವಾಗಿದ್ದ, ಸದ್ಯೋಗಸಿದ್ಧಿಂಗಳಂ ಮತ್ತೆ ನೀನಿತ್ತೆಯೋ... ನಾರಸಿಂಹಾತ್ಮ....ನಾವೆಲ್ಲರೂ ನಿನಗೆ ವಂದನಂಗಳ್ ಸಮರ್ಪಿಸುವೆವು" ಎಂದರು...||

ಆ ಮೇಲೆ ವಿದ್ಯಾಧರಾನೀಕಗಳ್ ನಿಂತು..."ಎಲೋ...ಸರ್ವ ವಿದ್ಯಾತ್ಮನೇ, ನಮ್ಮಲ್ಲಿದ್ದಾ ಪೃಥಕ್ ಧಾರಣಾಯೋಗ ಸಂಪಾದ್ಯಗಳ್, ವಿದ್ಯೆಗಳ್ ನಷ್ಟಗೈಸಿದ್ದನ್, ಅತ್ಯಂತ ದರ್ಪಿಷ್ಟನ್...ಈ ಅಜ್ಞದೈತ್ಯೇಂದ್ರನ್. ಆ ಯಜ್ಞದೊಳ್ ಬದ್ಧ ಪಶುವಂತೆ ತಾನ್ ಇಂದು ನಿನಿಂದಲ್ ಆ ಮೃತ್ಯು ಪಾಲಾದನೇ...ನಮ್ಮ ಸದ್ವಿದ್ಯೆಗಳ್ ಮತ್ತೆ ನಮ್ಮಲ್ಲೆ ಬಂದಿಪ್ಪುದಯ್ಯಾ...ನೃಹರ್ಯಾತ್ಮ ತುಭ್ಯಂ ನಮಃ..." ಎಂದರು...||

ನಾಗರ್ ಆ ವೇಳೆ..."ಎಲೋS ಅನಂತನೇ..ನಮ್ಮಲಿದ್ದಾ ಮಹಾರತ್ನಗಳ್...ಮಾನಿನೀ ರತ್ನಗಳ್, ತಾ ಬಲಾತ್ಕಾರದಿಂದ ಕೊಂಡನ್... ಈ ಪಾಪಿ ದೈತ್ಯನ್ನ ವಕ್ಷಸ್ಕವಂ ಸೇದಿ ಈ ರತ್ನಗಳ್ ಮತ್ತೆ ನೀ ನಮ್ಮಗೇ ಸೇರುವಂತೆ ದಯಮಾಡಿದೀಯ್ಯೈ...ನಮಸ್ತೇ ನಮಃ..." ಎಂದರು...||

ಮನ್ನುಗಳ್ ನಿಂತು..."ಎಲೋ ಧರ್ಮಸಂರಕ್ಷಕನೇ...ನಾವು ನಿನ್ನಾಜ್ಞೆಯಿಂದ ಈ ಪ್ರಜಾನೀಕಕೆ...ಏರ್ಪಾಟು ಮಾಡಿದ ಮರ್ಯಾದೆಗಳ್ ಸರ್ವವಂ...ಈ ದೈತ್ಯ, ತಾ ಕೆಡಿಸಿ ಕಲ್ಲೋಲವಂ ಮಾಡಿ ನಿನ್ನಿಂದಲೇ ಈಗ

ಸಂಹರಿಸಲ್ಪಟ್ಟನೇ...ಇನ್ನುಮೇಲೆ ನಾವು ನಿಮ್ಮುಕ್ತಿಗಳ್ ನಡೆಸುವೆವು... ಎಮ್ಮಗೆ ಆಜ್ಞಾಪಿಸೋ...ನಾವು ತ್ವತ್ ದಾಸ್ಯವಂ ಬಯಸಿದೆವು...." ಎಂದರು...||

ಆ ಪ್ರೇಜೇಶಾಳಿಗಳ್ ನಿಂತು....'ಕೇಳೋ...

ಪ್ರಜೇಶಾವಯಂ ತೇ ಪರೇಶಾಭಿಸೃಷ್ಟಾ ನ ಯೇನ ಪ್ರಜಾ ವೈ ಸೃಜಾಮೋ ನಿಷಿದ್ಧಾಃ|
ಸ ಯೇಷತ್ವಯಾ ಭಿನ್ನ ವಕ್ಷಾಸ್ತು ಶೇತೇ ಜಗನ್ಮಂಗಲಂ ಸತ್ವಮೂರ್ತೇವತಾರಃ||

ಪ್ರಭೋಽ....ಎಂದರು....||

ಆಗ ಗಂಧರ್ವರೆಲ್ಲಾ..." ಎಲೋ ಸ್ವಾಮಿಯೇ... ನಾವು ನಿಮ್ಮ ಪ್ರಸನ್ನಾವತಾರೈಕ ಲೀಲಾಕಥಾಸೂಕ್ತಿಗಳ್, ನಾಟ್ಯ ಶೃಂಗಾರ ಚೇಷ್ಟಾ ಕಲಾದರ್ಶನಾದ್ಯಭಿನಯಾವ್ಯಕ್ತಿಗಳ್, ತಾನಗಾನಾನುಸಂಧಾನ ಸನ್ಮೋಹಿನೀ ಶಕ್ತಿಗಳ್ ಕೂಡಿ, ಅಶ್ರಾಂತವುಂ ನಿನ್ನ ಕೊಂಡಾಡುತಾ, ಗಾಯಕ ಶ್ರೇಷ್ಠರಂತೆ ಇಪ್ಪೆವೇ...

ತನ್ನ ಸದ್ವೀರ್ಯ ತೇಜೋ ಬಲೋಜಸ್ಕದಿಂದಲ್, ನಮ್ಮ ಸಾಮರ್ಥ್ಯಗಳ್, ತನ್ನಗಾಧೀನಮಾಡಿ ಇಟ್ಟುಕೊಂಡಿದ್ದನ್, ಈ ದೈತ್ಯನ್...ಈ ವೇಳೆ ನಿನ್ನಿಂದ ಪಂಚತ್ವವಂ ಕೊಂಡನೇ...ಪೊಂಗಲಿಕ್ಕಿಚ್ಚೆ ತಾ ಕುಂಗಲಿಕ್ಕಲ್ಲದೇ ಉತ್ಪಥಸ್ಥಾಯಿ ಯಾವಾತನುಂ ಕ್ಷೇಮ ತಾನೇನು ಕಾಣೂವನೋ..." ಎಂದರು...||

ಚಾರಣಾನೀಕವುಂ ನಿಂತು...."ಎಲೋ ನಾಥನೇ...ಸಾಧು ಸಂತಾಪಿಯಾಗಿದ್ದನ್...ಈಪಾಪಿದೈತೇಯ ತನ್ನಿಂದ ತಾಂ ಬಿದ್ದನೇ... ನಾವ ಕದ್ದಕಳ್ಳರಂತಿದ್ದೆವೇ...ಇನ್ನುಮೇಲ್ ನಾವು ನಿನ್ನಂಘ್ರಿಕಂಜಾತವಂ, ಘೋರ ಸಂಸಾರ ವಾರಾಶಿ ಸಂಪೋತವಂ, ಸರ್ವವಾಶ್ರೈಸುವೆವು..." ಎಂದು ಕೊಂಡಾಡಿತು...||

ಆ ಯಕ್ಷರೆಲ್ಲಾ..."ಎಲೋ...ಅಧ್ಯಕ್ಷನೇ...ತ್ವನ್ ಮನೋಭಿಜ್ಞ ಕರ್ಮಂಗಳಿಂದಲ್, ಸದಾ ನಿನ್ನಗೇ ಭೃತ್ಯರಾಗಿಪ್ಪ ನೈವೆಲ್ಲರುಂ, ದೈತ್ಯಗೇ ಪಾಲಕೀ ಹೊರುವರಂತಾದೆವೇ...ನಮ್ಮ ಸಂತಾಪಗಳ್ ಬಲ್ಲ ನಿನ್ನಿಂದಲ್, ಈ ದೈತ್ಯನ್ ಈ ವೇಲೆ ಪಂಚತ್ವವಂ ಹೊಂದಿದಂ...ನಾವು ಸಂತೋಷವಂ ಕಂಡೆವಯ್ಯಾ....ನೃಪಂಚಾಸ್ಯನೇ ಪಂಚವಿಂಶಾಖ್ಯನೀನ್..." ಎಂದರು....||

ಆ ಮೇಲೆ ಕಿಂಪೂರುಷಾನೀಕವುಂ ಬಂದು... "ಎಲೋ ಪುರುಷನೇ ನಾವು ಕಿಂಪುರುಷರ್...ನೀಂ ಮಹಾಪೂರುಷಂ ಈಶ್ವರವಂ...ನಿನ್ನ ಕೈಯಲ್ಲಿ ಕುಪೂರುಷಂ ಅಸುರ ಶ್ರೇಷ್ಠ ತಾ ನಷ್ಟವಾದಂ....ಸದಾ ಸಾಧು ಸಂತಾಪ ಮಾಡೂವನ್ ಆವಾತ ಮಂದಕ್ಕೆ ಬಂದಾನು ತಾನ್..." ಎಂದು ಮಾತಾಡಿತು...||

ಆ ಮೇಲೆ ಭೇತಾಳ ಭೂತಾಳಿಳ್ ನಿಂತು..."ಎಲೋ, ದೇವನೇ ನಾವು ಮುನ್ನ ಆ ಸಭಾ ಸತ್ರ ಸಂಸಂಗದಲ್, ನಿನ ದಿವ್ಯಾಮಲಶ್ಲೋಕಗಳ್ ನಿತ್ಯ ಕೊಂಡಾಡುತಾ ಭೂರಿಯೂಟಂಗಳಂ ಉಣ್ಣುತಾಲಿದ್ದೆವು...ತಾನ್ ಇವೆಲ್ಲಾ ಪರಿಗ್ರಹಿಸಿ...ದೈತ್ಯ ನಿನ್ನಿಂದ ಪೆಟ್ಟಾಂತು ತಾ ಪೋದನೇ... ದೈವದಿಂದ ಒಡಲಿನಲ್ ವೇಗತಾ ಪೋದ ದಿಟ..." ಎಂದರು....||

ಕಿನ್ನರ ಶ್ರೇಣಿಗಳ್ ಬಂದು " ಎಲೋ....ಈಶನೇ ಕೇಳು...ನಾವೆಲ್ಲರ್ ಆ ಕಿನ್ನರ್ ಪ್ರಾಣಿಗಳ್...ಪೂರ್ವದಲ್ ನಿನ್ನ ದಾಸಾನುದಾಸರ್ಗಳ್ ಆಗಿಪ್ಪೆವು... ಈ ದೈತ್ಯ ನಮ್ಮಿಂದ ತಾ ಬಿಟ್ಟಿಕಾರ್ಯಂಗಳೆಲ್ಲಾ ಸದಾ ಮಾಡಿಸೂವಂ...ಮಹಾದುಃಖಗಳೀಸುವಂ..ಇಂಥ ಪಾಪಿಷ್ಠ ದೈತ್ಯನ್ನ ಸಂಹಾರವಂ ಮಾಡಿದೀ...ಇನ್ನು ನೀ ನಮಗೆಲ್ಲಾ ಸಮುಲ್ಲಾಸಗಳ್ ಶ್ರೇಯಗಳ್ ಕೊಟ್ಟು ಸಂರಕ್ಷಿಸೋ...ನಾರಹರ್ಯಾಕ್ಷನೇ..." ಎಂದರು...॥

ಅಚ್ಯುತದ್ವಾರಪಾಲಾಳುಗಳ್ ನಿಂತು..."ಎಲೋ, ಭೂಮನೇ ಕಂಡೆವೋ ಇಂದಿಗೇ...ನಾರಹರ್ಯದ್ಭುತಾಕಾರವಂ...ಲೋಕಕೆಲ್ಲಾ ಸಖಾನಂದವಂ...ನಮ್ಮಗಾಧಾರ ನೀನಿಲ್ಲದಿನ್ನಿಲ್ಲವೋ...ಈತ ವೈಕುಂಠದಲ್ ನಿನ್ನ ದ್ವಾರಸ್ಥನಾಪ್ಪನ್... ಆ ವಿಪ್ರರಿಂದಲ್ ಮಹಾದೈತ್ಯಜನ್ಮಕ್ಕೆ ತಾ ಬಂದನೇ...ಬಂದನ್ ಅಂತು ಇಂದಿಗೇ, ವೈರಮಾರ್ಗಕ್ಕೇ ನೀನಿಂದು ಗೈದಂಥ ಈ ದೈತ್ಯಸಂಹಾರ ವ್ಯಾಪಾರವು... ಎಮ್ಮಲ್ ಮಹಾನುಗ್ರಹಕ್ಕಾಗಿ ನೀಬಂದೆ....ನಾವ್ ಬಲ್ಲೆವಯ್ಯಾ ನಮಸ್ತೇ ನಮಃ..." ಎಂದರು....॥

ಈ ರೀತಿಯಿಂ ಪ್ರಸ್ತಮಸ್ಕಂಧದೊಳ್ ಅಷ್ಟಮಾಧ್ಯಾಯ ಸುಶ್ಲೋಕಿಗಳ್ ನಾಕಿಗಳ್...ಬ್ರಹ್ಮರುದ್ರಾದಿಕಾನೀಕಗಳ್...ನಾರಸಿಂಹನ್ನ ಸುಸ್ತೋತ್ರವಂ ಮಾಡಿ...ತತ್ಕೋಪ ಸಂಕ್ಷೇಪಗೈಸುವ ಸಾಮರ್ಥ್ಯಗಳ್ ಕಾಣದೇ....ಬಂದು, ಶ್ರೀದೇವಿ ಸಾನ್ನಿಧ್ಯದಲ್ ಸೇರಿ, "ಅಮ್ಮಾ...ಜಗನ್ನಾಥಂ ಸ್ವಾಂತಸಂತೋಷಮಾಡು..." ಎಂದು ಬಿನ್ನಹಗಳ್ ಮಾಳ್ಪರು.

ಆ ಮೇಲೆ ಆ ಬಾಲೆ, ಸಾಕ್ಷಾತ್ ಜಗ್ನನ್ಮೋಹಿನೀಲೀಲೆಗಳ್ ಮಿಂಚುತಾ ಪೊಂಚುತಾ ಬಂದು...ಸಿಂಹಾಸನಸ್ಥಾನಲ್ ಉಗ್ರನಂತಿಪ್ಪ ನೃಸಿಂಹಮೂತ್ಯುಗ್ರವಂ ಕಂಡು...ಆತಿ ವ್ಯಗ್ರಳಂತಾಗಿ...ಆತಾಯಿ ಹಿಂದಕ್ಕೆ ಬಂದಳ್... "ಅಮ್ಮಮ್ಮ...ಏಂ..ಗುಮ್ಮನಂತಿಪ್ಪನೇ...ಸ್ವಾಮಿ ಮುನ್ನಿಂತು ಆಶ್ಚರ್ಯವಂ ...ಈ ಸುವಿಕ್ರಮ್ಯವಂ...ಎಂದಿಗೂ ಅನ್ ಎಲ್ಲಿ ಕಂಡಿಲ್ಲವಲ್ಲಾ...ಕಿವಿಲ್ಯಾದರುಂ ಕೇಳಲೇ ಇಲ್ಲವಲ್ಲಾ....। ಇದೇನೋ ವಿಚಿತ್ರಾಕೃತೀಯಂತೆ ತೋರೂವನ್ ಎಂದಂಜಿಕೇಗೊಂಡರೀತಿಂದ ತಾ ಹೆಜ್ಜೆ ಕಾಲ್ಗೆಜ್ಜೆಗಳ ಸಪ್ಪುಳಂ ಮಾಡದೇ...ಮೆಲ್ಲನೇ ಪಾರ್ಶ್ವದಲ್, ನಿಂತಳೋ...॥

ಆಮೇಲೆ ಪ್ರಹ್ಲಾದನಂಕಂಡು ಸಂಭಾಷಿಪಂ ಬ್ರಹ್ಮ...."ಬಾರೈ ಏಲೋವತ್ಸ...ನೀನ್ ಈ ನೃಸಿಂಹಾತ್ಮನಲ್ ಮೆಲ್ಲನೇ ಸೇರಿ.... ನಿಮ್ಮಪ್ಪಗಾಗಿಂದು ನಮ್ಮಪ್ಪನಲ್ಲಿಪ್ಪ ತತ್ ಕೋಪ ಸಂಕ್ಷೇಪಗೈಸು..." ಎನೆ ತದ್ ವಾಣಾಗಳ್ ಕೇಳುತಾ....ಮೆಲ್ಲನೇ ಆಗ ಬಂದು...ಮಹಾಭಕ್ತಿಯಿಂದಲ್ ಮಹೀಮಂಡಲೀ ಮೇಲೆ ಸಾಷ್ಟಾಂಗಬಿದ್ದಂ ನಮೋ..." ಎಂದು ದಂಡಪ್ರಣಾಮಂಗಳಂ ಮಾಡವೋ ವೇಳೆ... ತನ್ನಂಘ್ರಿ ಕಂಜಾತದಲ್ ಬಿದ್ದ ಬಾಲನ್ನ...ಬಾಳಾ ಸುಶೀಲನ್ನ...ಕಂದನ್ನ ಬಾಚಿ, ಭಕ್ತನ್ನ ತಾನ್ ಎತ್ತಿ...ತನ್ ಮಸ್ತಕಸ್ಥಾನದಲ್...ಪೋಕಲಾಗಿನ್ನು ಸಂಸ್ರಸ್ತ ತೇಚೋಭಯಧ್ವಸ್ತವಂ ಸ್ವಸ್ತಿದಾನಕ್ರಿಯಾಭ್ಯಸ್ತವಂ....ಶ್ರೀಸತೀ ಸ್ತಬಕ ವಿನ್ಯಸ್ತವಂ... ಹಸ್ತವನ್ ಇತ್ತನ್... ಅವ್ಯಾಹತ ಸ್ವರ್ಶದಿಂದಲ್ ...ವಿಧೂತಾಶುಭವ್ರಾತನಾಗಿ ಈ ಅಭಿವ್ಯಕ್ತ ಲಕ್ಷ್ಮೀವಿಲಾಸಾತ್ಮ ಸಂದರ್ಶನೈಶ್ವರ್ಯವಂ ಕೂಡಿ ತತ್ಪಾದ

ಪದ್ಮಂಗಳಂ ಚಿತ್ತದಿಂದಿತ್ತನ್... ಆನನಂದದಿಂದಲ್ ಪ್ರಹೃಷ್ಯತ್ ತನು...ಕ್ಲಿನ್ನ ಚಿತ್ತಾಶ್ರುನೇತ್ರಾಬ್ಜನಾಗಿದ್ದು ಪ್ರಹ್ಲಾದನುಂ... ನಾರಸಿಂಹಾತ್ಮನಲ್ ನಿತು.... ಸಂಸ್ತೋತ್ರಕಾರಂಭಿಪಂ...॥

ಶ್ರೀರಮಾದೇವಿ ತಾನಾಗ ಸಮ್ಮೋಹಿನೀ ಸಂಪುಗಳ್ ಕೂಡಿ ಬಂದು....ಆ...ನೃಸಿಂಹಾಂಕದಲ್ ನಿಂದಳ್... ಆಬ್ರಹ್ಮನ್... ಆ ವೇಳೆಯಲ್....ನಾರಸಿಂಹಾತ್ಮನಲ್ ಸೇರಿ ಸುಕ್ಷೀರ ನೀರಾಭಿಷೇಕಂಗಳಂ ಚೀನಿ ಚೆನಾಂಬರಂಗಳ್...ಮಹಾನರ್ಘ್ಯ ರತ್ನಾವಳೀ ಭೂಷಣಂಗಳ್...ಲಸನ್ಮೌಕ್ತಿಕಾ ಹೀರ ಹಾರಂಗಳಂ...ಗಂಧಕಸ್ತೂರಿಕಾಲೇಪ....ಶ್ರೀತುಳಸ್ಯಾಪ್ತ ಶಾಮಂತಿಕಾ ತುಂಗ ಮಂದಾರ ಕುಂದ ಅರವಿಂದಾದಿ ಮಾಲಾದಿಗಳ್ ಸ್ವರ್ಣವರ್ಣೋಪವೀತಂಗಳು...ದಿವ್ಯಸಾಹಸ್ರನಾ ಮಾರ್ಚನಂಗಳ್...ಅಗರ್...ಗಂಧ ಸಾಮ್ರಾಣಿ...ಧೂಪಂಗಳಂ....ಚಿತ್ರ ರತ್ನಪ್ರಭಾದೀಪಿಕಾ ಪಂಕ್ತಿಗಳ್....ದಿವ್ಯ ನಾನಾ ಉಪಾಹಾರಂಗಳಂ ಕೊಟ್ಟು ತಂತ್ರಸಾರೋಕ್ತಿದಿಂ ದೇವನಂ ಪೂಜೆಗಳ್ ಮಾಡುತಾ ನಿಂತನ್...॥

ಆ ಶರ್ವ ಶಕ್ರಾದಿ ದಿಕ್ಪಾಲರ್ ಆ ವೇಶೆ ತತ್ ಸೇವೇಯಲ್ಲಿಪ್ಪರ್ ಆ ವಾಣಿ ಶರ್ವಾಣಿ ಇಂದ್ರಾಣಿ ಮುಖ್ಯಾಂಗನಾಶ್ರೇಣಿಗಳ್ ಕೂಡಿ... ಶ್ರೀದೇವಿಗೇ ಪೂಜೆಗಳ್ ಮಾಡುತಾ ನಿಂತರ್...॥

ಆ ನಾರಹರ್ಯಕ್ಷನುಂ ಲಕ್ಷ್ಮೀಸಮೇತನಾಗಿದ್ದು, ಪ್ರಹ್ಲಾದ ಕೈ ಸ್ತೋತ್ರಗಳ್ ಕೇಳುತಾ...ಸುಪ್ರಸನ್ನಾತ್ಮ, ಇಷ್ಟಾರ್ಥಗಳ್ ಬೀರುತಾ...ಬ್ರಹ್ಮರುದ್ರಾದ್ಯರಲ್ ಪೂಜೆಗೊಳುತ್ತಿದ್ದನು...॥

ಎಂದು...ಕೌಂತೇಯಗೇ, ನಾರದಋಷಿ, ಪ್ರಜಾಹರ್ಷಿ ತಾ ನುಡಿದನ್...ಆ ರೀತಿ ಶ್ರೀಮತ್ ಪರೀಕ್ಷಿನ್ಮಹಾರಾಜಗೇ, ವ್ಯಾಸಜನ್ ನುಡಿದನ್...ಆ ರೀತಿ ಆ ಸೂತಪೌರಾಣಿಕಂ, ಶೌನಕಾದ್ಯರ್ಷಿ ಸಂದೋಹಕೇ ನುಡಿದನೆಂತೆಂದು... ಶ್ರೀನಾರಸಿಂಹಾವತಾರ ಸ್ಫುರಲ್ಲೀಲೆಯಿಂ ನ್ಯಾಮತೀ ಲಕ್ಷ್ಮೀನೃಸಿಂಹನಾ ನಾನಿಂತು ಕೊಂಡಾದಿದೆಂ.....॥

ಈ ಕಥಾಕೋದಂಡಕ್ಕೋದಂಡವಂ, ನಿತ್ಯ ಕೊಂಡಾಡುತಾ...ಪೇಳುತಾ...ಕೇಳುತಾ...ಭಕ್ತಿಕೂಡಿದ್ದ ತತ್ ಸಾಧು ಸಂತಾನಕೇ...ಪಾಪಗಳ್ ಲೋಪಗಳ್ ಮಾಡುತಾ...ತಪ್ಪುಗಳ ಸೈಸುತಾ....ಐಹಿಕಾಮುಷ್ಮಿಕಾನಂದ ಇಷ್ಟಾರ್ಥಗಳ್ ಶ್ರೀಲಕ್ಷ್ಮೀನರಸಿಂಹಾತ್ಮನಾಗಿದ್ದು ನೀನೀವೇಯೋ...ಸ್ವಾಮಿಯೇ....ತಲ್ಪಶೈಲೇಂದ್ರ ಸದ್ಧಾಮಿಯೇ...ರಂಗವಿಟ್ಠಲ್ಲ ಸನ್ನಾಮಿಯೇ...ಶ್ರೀರಮಾಕಾಮಿಯೇ...ಪ್ರೇಮಿಯೇ...ತ್ವಾಂ ನಮಸ್ತೇ...ನಮಸ್ತೇ...ನಮಸ್ತೇ.....ನಮಃ...॥

**॥ ಇತಿ ಶ್ರೀ ಶ್ರೀಪಾದರಾಜಯತೀಂದ್ರ ಪೂಜ್ಯಚರಣ ವಿರಚಿತಂ**

**ಶ್ರೀಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕಂ ಸಂಪೂರ್ಣಂ॥**

**॥ಶ್ರೀಕೃಷ್ಣಾರ್ಪಣಮಸ್ತು ॥**